+ ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ) : ತಾವು ತಮಗೆ ಸಂಬಂಧಪಟ್ಟ ಹಾಗೆ ನಮಗೆ ಪ್ರತಿದಿನ ವರದಿಗಳನ್ನು ನಾಲ್ಕೈದು ಕೇಜಿ ಕಳುಹಿಸುತ್ತಿದ್ದೀರಿ. ಅದನ್ನು ನಾವು ಯಾವುದೂ ಓದುವುದಕ್ಕಾಗುತ್ತಿಲ್ಲ. ಇದು ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಹಿಡಿತ ಇದೆಯೋ ಇಲ್ಲವೋ ಎಂದು ಗೊತ್ತಾಗುತ್ತಿಲ್ಲ. ಈ ವರದಿಗಳು ಎಲ್ಲ ಇಂಗ್ಲೀಷ್‌ನಲ್ಲಿ ಬರುತ್ತಿವೆ. ಪ್ರಶ್ನೋತ್ತರ ವೇಳೆಯಲ್ಲಿ ತಮಗೆ ಗೊತ್ತಿದೆ ತಾವು ಇದರ ಜವಾಬ್ದಾರಿ ತೆಗೆದುಕೊಳ್ಳುವುದು ಅನಾವಶ್ಯಕ. ಸರ್ಕಾರ ಇದನ್ನು ಮಾಡಬೇಕಾಗಿತ್ತು. ನಿನ್ನೆ ರಾತ್ರಿ ನಾನು ನಿಗಾವಹಿಸಿ ನೋಡಿದ್ದೇನೆ, ಎಲ್ಲ ವರದಿಗಳು ಸಹ ಮಂಡ್ಯ ಮತ್ತು ಎರಡು-ಮೂರು ಜಿಲ್ಲೆಗಳ ಜಿಲ್ಲಾ ಪಂಚಾಯಿತಿಗಳ ವರದಿಗಳನ್ನು ಬಿಟ್ಟು ಬಾಕಿ ಎಲ್ಲ ವರದಿಗಳು ಇಂಗ್ಲೀಷ್‌ನಲ್ಲಿ ಬರುತ್ತಿದೆ. ಇದಕ್ಕೆ ಎಲ್ಲಿಯಾದರೂ ಒಂದು ಕಡೆ ಕಡಿವಾಣ ಹಾಕದಿದ್ದರೆ ಇದನ್ನು ಯಾರೂ ಕೇಳುವುದಕ್ಕಾಗುವುದಿಲ್ಲ. ಮಾನ್ಯ ಸಂಸದೀಯ ವ್ಯವಹಾರ ಮಂತ್ರಿಗಳು ಎಲ್ಲವೂ ಸಹ ಕನ್ನಡದಲ್ಲಿ ಬರುವ ಹಾಗೆ ಮಾಡಬೇಕಾಗುತ್ತದೆ. ತಮ್ಮ ಇಲಾಖೆಗೆ ಸಂಬಂಧಪಟ್ಟ ಹಾಗೆ ಆಕ್ಟ್‌ಗಳನ್ನು ಅಮೆಂಡ್‌ಮೆಂಟ್ ಮಾಡಿದ್ದೀರಿ, ಅದನ್ನು ಪಬ್ಲಿಷ್ ಮಾಡುತ್ತೀರಿ. ಪಬ್ಲಿಷ್ ಮಾಡಿದ ಆಕ್ಟ್‌ಗಳು ಮೂಟೆಗಟ್ಟಲೆ ಪ್ರತಿನಿತ್ಯ ನಮಗೆ ಬರುತ್ತದೆ. ನನಗೆ ಗೊತ್ತಿರುವ ಹಾಗೆ ಯಾವ ಶಾಸಕರೂ, ಮಂತ್ರಿಗಳೂ ಸಹ ಅದನ್ನು ಓದುವುದಕ್ಕಾಗುವುದಿಲ್ಲ. ನಾವು ಅದನ್ನು ಇಟ್ಟುಕೊಂಡು ಸದನ ಇಲ್ಲದೆ ಇರುವ ಸಮಯದಲ್ಲಿ ಓದುತ್ತೇವೆ. ಒಂದೂ ಸಹ ಕನ್ನಡದಲ್ಲಿ ಬರುವುದಿಲ್ಲ. ಜಿಲ್ಲಾ ಪಂಚಾಯಿತಿಯದು ಒಂದನ್ನು ಬಿಟ್ಟರೆ ಬಾಕಿ ಎಲ್ಲಾವೂ ಸಹ ಇಂಗ್ಲೀಷ್‌ನಲ್ಲಿ ಬರುತ್ತಿವೆ. ಎರಡನೆಯದಾಗಿ, ನಾನು ಈ ಬಗ್ಗೆ ತಮ್ಮ ಕಾರ್ಯಾಲಯದಲ್ಲಿ ಮನವಿ ಮಾಡಿಕೊಳ್ಳುವುದಕ್ಕೆ ಬಯಸುತ್ತೇನೆ.

ಅ. ಬೆಳಗಾವಿಯ ಶಾಸಕರಾದ ಶ್ರೀ ಎ.ಬಿ. ಪಾಟೀಲ್‌ರವರ ಪ್ರಶ್ನೆಯಾದ ಶಾಸಕರ ಹಕ್ಕಿನ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೆ, ಸ್ವಚ್ಛ ಗ್ರಾಮಗಳ ಬಗ್ಗೆ ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಟ್ಟಿರುವುದಕ್ಕೆ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ತಾವು ಅತಿಗೆ ತಪ್ಪದೇ ಇವೊತ್ತೇ ಅದನ್ನು ಅರ್ಧ ಗಂಟೆ ಕಾಲಾವಧಿಯಲ್ಲಿ ಚರ್ಚೆಗೆ ತೆಗೆದುಕೊಂಡಿರುವುದಕ್ಕೆ ನಿಮಗೆ ಚಿರಋಣಿ ನಾವು ವಿರೋಧಪಕ್ಷದಲ್ಲಿ 80 ಜನ ಶಾಸಕರಿದ್ದೇವೆ. ಈಗಾಗಲೇ ನಮ್ಮ ಪಕ್ಷದ 19 ಜನ ಶಾಸಕರು ಸಹಿ ಮಾಡಿ ಬೆಳಗಾವಿಯ ಶಾಸಕರಾದ ಎ.ಬಿ. ಪಾಟೀಲ್‌ರವರ ಪ್ರಶ್ನೆಯಾದ ಶಾಸಕರ ಹಕ್ಕಿನ ಬಗ್ಗೆ ಚರ್ಚೆ ಮಾಡಲು ಅವಕಾಶ ಕೋರಿ ತಮ್ಮಲ್ಲಿ ಮೊರೆಹೋಗಿದ್ದೇವೆ. ಇಂದು ರಾವಣನ ಮತ್ತು ದುರ್ಯೋಧನನ ಬಲವಿದೆಯೆಂದು ಆಡಳಿತ ಪಕ್ಷದವರು ತಿಳಿದುಕೊಂಡು, ನಾವೇನು ಸರ್ವಾಸುಮು, ಸರ್ವಸಮ್ಮತವೆಂದು ಹೇಳುತ್ತೇವೆಯೋ ಅದನ್ನು ಬಿಟ್ಟು ಏಕಾಏಕಿಯಾಗಿ ಬಹುಮತದ ಆಧಾರದ ಮೇಲೆ ಆಶ್ರಯ ಸಮಿತಿಯಲ್ಲಿ ಮನೆಗಳನ್ನು ಬಡವರಿಗೆ ಕೊಡುತ್ತೇವೆ ಎಂದು ಹೇಳಿರುವುದಕ್ಕೆ ಅದರ ಮೇಲೆ ಚರ್ಚೆ ಮಾಡಲು ಅರ್ಧ ಗಂಟೆ ಕಾಲಾವಧಿಯನ್ನು ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ಅಧ್ಯಕ್ಷರಾದ ತಾವು ನಮಗೆ ಹೇಳಿದ್ದೀರಿ. ಸಂಯುಕ್ತ ಜನತಾದಳದ 19 ಜನ ಶಾಸಕರು

ತಮಗೆ ಒಂದು ಮನವಿಯನ್ನು ಕೊಡುತ್ತೇವೆ ಮತ್ತು ನಾವು ಆಗ್ರಹಪೂರ್ವಕವಾಗಿ ಮನವಿ ಮಾಡಿಕೊಳ್ಳುವುದೇನೆಂದರೆ ಸರ್ಕಾರ ಬಹುಮತದಿಂದ ಮನೆಗಳನ್ನು ಹಂಚುವುದು ಸರಿಯಲ್ಲ. ಸರ್ಕಾರ ಹಿಂದೆ ರಾಜ್‌ಕುಮಾರ್‌ರವರು ವೀರಪ್ಪನ್‌ನಿಂದ ಬಿಡುಗಡೆಯಾಗಬೇಕಾದರೆ ಸರ್ವಪಕ್ಷಗಳ ಸಹಮತ ಬೇಕು ಎಂದರು. ಹಿಂದೆ ವಿದ್ಯುತ್ ದರದ ಬಗ್ಗೆ ನಿಮ್ಮವರು ಆಂಧ್ರದಲ್ಲಿ ಗಲಾಟೆ ಮಾಡುತ್ತಿದ್ದ ಸಂದರ್ಭದಲ್ಲಿ ಪ್ರಧಾನಿಗಳ ಮುಂದೆ ಹೋಗಿ ಈ ವಿಚಾರದಲ್ಲಿ ಸರ್ವಸಮ್ಮತ ಬೇಕು ಎಂದು ಹೇಳತಕ್ಕಂಥ ಮುಖ್ಯಮಂತ್ರಿಗಳು ಆಶ್ರಯ ಮನೆಗಳ ವಿಚಾರ ಬಂದಾಗ ಮಾತ್ರ ಏಕಪಕ್ಷೀಯ ನಿರ್ಧಾರವಿರಲಿ ಎಂದರೆ ಹೇಗೆ? ಆದುದರಿಂದ ಅಧ್ಯಕ್ಷರು ನಮ್ಮ ನೆರವಿಗೆ ಬಂದು ಈ ವಿಚಾರದ ಬಗ್ಗೆ ಇವೊತ್ತೇ ಅರ್ಧ ಗಂಟೆ ಕಾಲವಧಿಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಡಬೇಕು. ಬೆಳಗಾವಿ ವಿಷಯದ ಬಗ್ಗೆ ತಾವು ಅರ್ಥ ಮಾಡಿಕೊಂಡು ಮಾನ್ಯ ಉಮೇಶ್‌ಕತ್ತಿ ಹಾಗೂ ಮಾನ್ಯ ಎ.ಬಿ. ಪಾಟೀಲರ ವಿಷಯವನ್ನು ಅರ್ಥ ಮಾಡಿಕೊಂಡು ಅಲ್ಲಿನ ಸಿ.ಇ.ಓ.ರವರಿಗೆ ಸೂಚನೆ ಕೊಡುವುದರ ಮೂಲಕ ಸಭೆಯನ್ನು ಮುಂದಕ್ಕೆ ಹಾಕಿದ್ದೀರಿ. ಇದೇ ಸಭೆ ಮತ್ತೆ 12ನೇ ತಾರೀಖು ಇದೆ. ಅವೊತ್ತು ಸಭೆ ನಡೆದುಹೋದ ಮೇಲೆ ಇವರು ಏನು ಕ್ರಮ ತೆಗೆದುಕೊಳ್ಳುತ್ತಾರೆ. ಒಂದು ವೇಳೆ ಇವರ ಆಡಳಿತದಲ್ಲಿ ವಿರೋಧ ಪಕ್ಷಕ್ಕೆ ಮಾನ್ಯತೆ ಇಲ್ಲವೆಂದು ಪಕ್ಷದಲ್ಲಿ ಆಲ್‌ರೈಟ್, ಅದಕ್ಕೆ ನಮ್ಮ ತೊಂದರೆಯೇನೂ ಇರುವುದಿಲ್ಲ. ನಮ್ಮ ಹತ್ತಿರ ಕಮಿಶನ್ ತೆಗೆದುಕೊಳ್ಳುವವರು, ಮತ್ತೊಬ್ಬರು, ಮಗದೊಬ್ಬರು ಯಾರು ಬರುವುದಿಲ್ಲ. ಮನೆಗಳನ್ನು ಅವರುಗಳು ಯಾವ ಯಾವ ರೀತಿಯಲ್ಲಿ ಹಂಚುತ್ತಾರೋ ನೀವು ಅಲ್ಲಿಗೇ ಹೋಗಿ ಎಂದು ಹೇಳಿ ಗ್ರಾಮಸಭೆಗಳನ್ನು ಎಲ್ಲೆಲ್ಲಿ ನಡೆಸುತ್ತಾರೋ ಅಲ್ಲಿಗೇ ಬಡವರು ಹೋಗಿ, ಅಲ್ಲಿಯೇ ಮನೆಗಳನ್ನು ಹಂಚುತ್ತಾರಂತೆ ಎಲ್ಲರೂ ಬರ್ರಪ್ಪಾ, ಬನ್ರಿ ಎಂದು ನಾವೂ ಕೂಡ ಡಂಗುರ ಸಾರಿಕೊಂಡು ಬರ್ತೇವೆ. ಗ್ರಾಮಸಭೆಗಳನ್ನು ಚೆನ್ನಾಗಿ ಮಾಡಿ ಅದರ ಪ್ರಕಾರ ಫಲಾನುಭವಿಗಳನ್ನು ಆಯ್ಕೆ ಮಾಡಿ. ಅದಕ್ಕೆ ನಮ್ಮ ತಕರಾರೇನು ಇಲ್ಲ. ಈ ಗಂಗಾ ಕಲ್ಯಾಣ ಎನ್ನುವುದು ಮೂರು ಇರುವುದರಿಂದ ಶಾಸಕರಿಗೆ ಹಕ್ಕಿದೆ, ಅದೇ ಮುನ್ನೂರು ಇದ್ದಿದ್ದರೆ ನಮಗೆ ಸಿಗುತ್ತಿರಲಿಲ್ಲ ಎಂದು ಹೇಳಿ ಇದರಿಂದ ಭಾಸವಾಗುತ್ತದೆ. ಆದುದರಿಂದ ಅಧ್ಯಕ್ಷರೆ, ವಿರೋಧ ಪಕ್ಷದ ಎಲ್ಲಾ ಶಾಸಕ ಮಿತ್ರರ ಪರವಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ತಾವು ದೊಡ್ಡ ಮನಸ್ಸು ಮಾಡಿ, ನಮ್ಮ ರಕ್ಷಣೆಗೆ ಬಂದು ಚರ್ಚೆಗೆ ಅವಕಾಶ ಕೊಡುವ ಬಗ್ಗೆ ಅನುಕಂಪದಿಂದಲಾದರೂ ನಮಗೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಮಾನ್ಯ ಸಿಂಧ್ಯಾರವರು ಅನೇಕ ಪ್ರಶ್ನೆಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇಲ್ಲಿ ರಾವಣನ ಬಲವಾಗಲಿ, ದುಯೋಧನದ ಬಲವಾಗಲಿ ಅಥವಾ ರಾಕ್ಷಸೀ ಬಲವಾಗಲಿ ಇಲ್ಲ. ನಮಗೆ ಇಲ್ಲಿ ರಾಮಕೃಷ್ಣರ ಬಲಮಾತ್ರ. ಕಷ್ಣಾ ಸಂಧನದ ಕೆಲಸವನ್ನು ಬಹಳ ಚೆನ್ನಾಗಿ ಮಾಡಿದ್ದಾರೆ. ಇಂಥ ವಿಚಾರಗಳು ಬಂದಾಗ ಸಂಧಾನದ ಮೂಲಕವೇ ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಸಂಧಾನ ಎಂದರೆ ಪ್ರತಿಪಕ್ಷಗಳ ಎಲ್ಲಾ ಮುಖಂಡರ ಜೊತೆ ಕುಳಿತು ಮಾತನಾಡಿ ಸಮಸ್ಯೆ ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ. ಆದರೆ ತಾವೇ ಕೊಟ್ಟಿರುವ ನಿಯಮಗಳಡಿಯಲ್ಲಿ ನಾವೆಲ್ಲರೂ ಕೆಲಸ ಮಾಡಬೇಕಾಗುತ್ತದೆ. ಇವೊತ್ತಿನವರೆಗೂ ರಾಜ್ಯಪಾಲರ ಭಾಷಣದ ವಂದನಾ

ನಿರ್ಣಯದ ಮೇಲೆ ಚರ್ಚೆಯನ್ನೇ ಕೈಗೆತ್ತಿಕೊಂಡಿಲ್ಲ. ಇದರ ಬಗ್ಗೆ ನಾನು ಏಕೆ ಎಂದು ಕೇಳುತ್ತಿಲ್ಲ. ಅಷ್ಟೇ ಪ್ರಮುಖವಾದ ವಿಚಾರವನ್ನೇ ಸದನದಲ್ಲಿ ಚರ್ಚೆಗೆ ತೆಗೆದುಕೊಂಡಿದ್ದರಿಂದ ನಾನು ಈ ಪ್ರಶ್ನೆಯನ್ನು ಕೇಳುವುದಕ್ಕೆ ಹೋಗುವುದಿಲ್ಲ. ಪ್ರಶ್ನೋತ್ತರ ಇರಬಹುದು, 69ನೇ ನಿಯಮದಡಿಯಲ್ಲಿ ಇರಬಹುದು, ಎಲ್ಲವೂ ಇದುವರೆಗೆ ವಿರೋಧ ಪಕ್ಷದವರು ಹೇಳಿದ ಹಾಗೆ ಸದನದಲ್ಲಿ ಚರ್ಚೆ ನಡೆದಿದೆ. ಈಗ ಮತ್ತೆ ಎರಡು ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ಇದಕ್ಕೂ ಕೂಡ ನಮ್ಮದು ಏನೇನೂ ಅಭ್ಯಂತರವಿಲ್ಲ. ಇದಕ್ಕಾಗಿ 80 ಜನ ಶಾಸಕರ ಹಕ್ಕು ಕಿತ್ತುಕೊಳ್ಳುವ ಅಥವಾ ಕೊಡುವ ಪ್ರಶ್ನೆಯೇ ಬರುವುದಿಲ್ಲ. ಸದನ ನಡೆಯಬೇಕು ಎಂಬುದೇ ಎಲ್ಲರ ಇಚ್ಛೆ. ಇಲ್ಲಿ ಎಲ್ಲ ಸದಸ್ಯರಿಗೂ ಸಮಾನವಾದ ಹಕ್ಕಿದೆ. ಸರ್ಕಾರ ಯಾವುದಕ್ಕೆ ಉತ್ತರಿಸಬೇಕೋ ಅದಕ್ಕೆ ಉತ್ತರಿಸುತ್ತದೆ. ಯಾವುದಕ್ಕೆ ಸ್ಪಂದಿಸಬೇಕೋ ಅದಕ್ಕೆ ಸ್ಪಂದನ ಮಾಡತಕ್ಕಂಥದ್ದು ನಮ್ಮ ಜವಾಬ್ದಾರಿ ಮಾತ್ರವಷ್ಟೇ ಅಲ್ಲ, ಅದು ನಮ್ಮ ಗುರುತರವಾದ ಹೊಣೆಗಾರಿಕೆಯನ್ನು ಹೊತ್ತುಕೊಂಡೇ ನಾವು ಕೆಲಸ ಮಾಡುತ್ತಿದ್ದೇವೆ. ಮಾನ್ಯ ಸಿಂಧ್ಯರವರು ನಾವು ಎಲ್ಲಾದರೂ ರಾಕ್ಷಸೀ ಶಕ್ತಿಯನ್ನು ಪ್ರಯೋಗಿಸಿದ ನಿದರ್ಶನವನ್ನು ಹೇಳಿದರೆ ಅದಕ್ಕೆ ನಾನು ಉತ್ತರ ಹೇಳುವುದಕ್ಕೇ ಹೋಗುವುದಿಲ್ಲ, ಅದನ್ನು ನಾನು ಒಪ್ಪಿಕೊಂಡೇ ಬಿಡುತ್ತೇನೆ. ಈಗ ಆಶ್ರಯ ಯೋಜನೆಯಲ್ಲಿ ಫಲಾನುಭವಿಗಳ ಆಯ್ಕೆ ಮಾಡುವುದರಲ್ಲಿ ತೊಂದರೆಯಿದೆಯೆಂದು ಹೇಳಿದ್ದಾರೆ. ಆ ತೊಂದರೆ ಏನು ಎಂದು ನನಗೆ ಗೊತ್ತಿಲ್ಲ. ಕೆಳಗಡೆಯಲ್ಲಿ ಗ್ರಾಮ ಸಭೆ ಆಯ್ಕೆ ಆಡಿರುವ ಪಟ್ಟಿ ಆಶ್ರಯ ಸಮಿತಿಗೆ ಬರುತ್ತದೆ. ಸಂಬಂಧಪಟ್ಟ ಮಂತ್ರಿಗಳೂ ಕೂಡ ಇದಕ್ಕೆ ಇದ್ದಾರೆ. ಆದುದರಿಂದ ಇದರ ಬಗ್ಗೆ ಚರ್ಚೆ ಮಾಡಲು ನನ್ನದೇನೂ ಅಭ್ಯಂತರವಿಲ್ಲ. ಆದರೆ ವಿಷಯದ ಬಗ್ಗೆ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟ ಹಾಗೆ ನಿಯಮ 59ರಲ್ಲಿ ಏನು ಹೇಳಲಾಗಿದೆಯೆಂದರೆ, ಅಧ್ಯಕ್ಷರು ವಾರದಲ್ಲಿ ಎರಡು ದಿನ, ಅಂದರೆ ಮಂಗಳವಾರ ಹಾಗೂ ಗುರುವಾರಗಳಂದು ಆಯಾಯ ದಿನಗಳ ಸದನದಕಾಲಾಪಗಳು ಮುಕ್ತಾಯವಾಗುವ ಸಂದರ್ಭದಲ್ಲಿ ಸಭೆಯಲ್ಲಿ ಇತ್ತೀಚೆಗೆ ಪ್ರಸ್ತಾಪಿಸಲಾದ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಅಂಥ ಪ್ರಶ್ನೆಗಳಿಗೆ ಸಭೆಯ ಮುಂದೆ ಉತ್ತರ ನೀಡಲಾಗಿದ್ದರೂ ಕೂಡ ಇವುಗಳನ್ಯಾವುದನ್ನೂ ಗಣನೆಗೆ ತೆಗೆದುಕೊಳ್ಳದೇ ಪ್ರಶ್ನೆಗಳ ಮೇಲಿನ ಉತ್ತರವು ವಸ್ತು ವಿಷಯದ ಮೇಲೆ ವಿವರಣೆ ಅಪೇಕ್ಷಿ ಉಂಟುಮಾಡುವ ಹಾಗಿದ್ದರೆ ಅಂಥ ಸಾರ್ವಜನಿಕ ಮಹತ್ವವುಳ್ಳ ವಿಷಯದ ಮೇಲೆ ಚರ್ಚೆ ಮಾಡಲು ಅರ್ಧ ಗಂಟೆ ಸಮಯವನ್ನು ಗೊತ್ತುಪಡಿಸಬಹುದು ಎಂದು ಹೇಳಲಾಗಿದೆ. ಈಗಾಗಲೇ ಒಂದು ವಿಷಯದ ಮೇಲೆ ಚರ್ಚೆ ಮಾಡಲು ಅವಕಾಶ ಕೊಟ್ಟುಬಿಟ್ಟಿದ್ದೀರಿ. ಆದುದರಿಂದ ಇನ್ನೊಂದಕ್ಕೆ ಗುರುವಾರ ನಿಗದಿ ಮಾಡಬಹುದು. ಅದಕ್ಕೆ ನಮ್ಮದೇನೂ ತಕರಾರಿಲ್ಲ.

ಶ್ರೀ ಸಿ. ಬೈರೇಗೌಡ : ಮಾನ್ಯ ಕಾನೂನು ಸಚಿವರು ನಮ್ಮ ನಿಲುವನ್ನು ಸರಿಯಾಗಿ ಅರ್ಥಮಾಡಿಕೊಂಡ ಹಾಗೆ ಕಾಣುತ್ತಿಲ್ಲ. ಪ್ರಶ್ನೋತ್ತರ ವೇಳೆಯಲ್ಲಿ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ನಾವು ಅಧ್ಯಕ್ಷರಲ್ಲಿ ಮನವಿಯನ್ನು ಮಾಡಿದ್ದೇವು. ಅವರು ತೆಗೆದುಕೊಳ್ಳೋಣವೆಂದು ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಅದಕ್ಕೆ ಅವಕಾಶವನ್ನು ಈಗ ಅಧ್ಯಕ್ಷರಲ್ಲಿ ನಾವು ಕೇಳುತ್ತಿದ್ದೇವೆ. ನೀವು ಚರ್ಚೆಗೆ ವಿರೋಧ ಮಾಡುತ್ತಿದ್ದೀರಿ ಎಂದು ಹೇಳುತ್ತಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ: ಅಷ್ಟಕ್ಕೇ ಸೀಮಿತವಾಗಿದ್ದರೆ ನಾನೇನೂ ಹೇಳುತ್ತಿರಲಿಲ್ಲ. ರಾಕ್ಷಸೀ ಶಕ್ತಿ ಎನ್ನುವ ಪದವನ್ನು ಬಳಸಿದ್ದರಿಂದ ನಾನು ಹೇಳಬೇಕಾಯಿತು.

ಶ್ರೀ ಸಿ.ಬೈರೇಗೌಡ: ಹೌದು, ರಾವಣನ ಬಲ, ರಾಕ್ಷಸನ ಬಲ ಬಳಕೆಯಾಗುವುದರಿಂದಲೇ ಇಲ್ಲಿ ಆ ವಿಷಯದ ಬಗ್ಗೆ ಚರ್ಚೆಯಾಗಬೇಕು ಎಂದು ಅವಕಾಶ ಕೋರಿ ವಿನಂತಿ ಮಾಡುತ್ತಿರುವುದು.

ಶ್ರೀ ಡಿ.ಬಿ. ಸದಾನಂದಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಇಂಥ ಗಂಭೀರವಾದ ವಿಷಯವನ್ನು ಏಕೆ ಪ್ರಸ್ತಾಪ ಮಾಡಿದರೆಂದರೆ ಈಗ ತಾವೇನು ಅರ್ಧಗಂಟೆ ಕಾಲಾವಧಿ ಚರ್ಚೆಗೆ ವಿಷಯವನ್ನು ಹಾಕಿಕೊಂಡಿದ್ದೀರೋ ಅದಕ್ಕೆ ಮೊದಲೇ ಈ ವಿಷಯ ಸದನದಲ್ಲಿ ಪ್ರಸ್ತಾಪವಾಗಿತ್ತು. ಎಲ್ಲಾ ಸದಸ್ಯರ ಗೌರವದ ಪ್ರಶ್ನೆಯಾದ ಕಾರಣ ಇದಕ್ಕೆ ಆದ್ಯತೆ ಕೊಡಬೇಕಾಗಿತ್ತು ಎಂಬುದೇ ನಮ್ಮ ಕೋರಿಕೆಯಾಗಿದೆ. ನಾವೆಲ್ಲರೂ ಈಗ ಒಂದು ತೀರ್ಮಾನದ ಹಂತಕ್ಕೆ ಬಂದಿದ್ದೇವೆ. ಒಂದು ವೇಳೆ ಸದನದಲ್ಲಿ ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚೆಯಾಗದೇ ಇದ್ದರೆ, ಆಡಳಿತ ಪಕ್ಷದವರು ಹಿಡಿದ ಪಟ್ಟನ್ನು ಬಿಡದೇ ಅವರಿಗೆ ಬೇಕಾದ ಹಾಗೆ ಎಲ್ಲ ಕೆಲಸ ಕಾರ್ಯಗಳನ್ನು ಮಾಡಲು ಮಾತ್ರ ಸಮಿತಿಯು ರಚನೆಯಾಗುವುದಿದ್ದರೆ ನಾವು ಶಾಸಕರಾಗಿ ನಮ್ಮ ಜವಾಬ್ದಾರಿಯನ್ನು ಪೂರೈಸುವುದಕ್ಕೆ ಕಷ್ಟವಾಗುತ್ತದೆ ಎಂಬುದನ್ನು ಅಧ್ಯಕ್ಷರಾದ ತಮ್ಮಲ್ಲಿ ತಿಳಿಸಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ: ತಾವೇ ಕೋರ್ಟ್‌ಗೆ ಹೋಗಿದ್ದೀರಿ

ಶ್ರೀ ಡಿ.ಬಿ. ಸದಾನಂದಗೌಡ: ನಾನು ಆಶ್ರಯ ಸಮಿತಿ ರಚನೆ ಬಗ್ಗೆ ಕೋರ್ಟ್‌ಗೇ ಹೋಗಿಲ್ಲ. ತಾವು ತಪ್ಪು ತಿಳಿದುಕೊಂಡಿದ್ದೀರಿ. ಕಾನೂನು ಮಂತ್ರಿಗಳು ದಯವಿಟ್ಟು ತಿಳಿದುಕೊಳ್ಳಬೇಕು. ಆಶ್ರಯ ಸಮಿತಿ ಬಿಟ್ಟು ಬಾಕಿ ಸಮಿತಿಗಳ ರಚನೆ ಬಗ್ಗೆ ನಾನು ಕೋರ್ಟ್‌ಗೆ ಹೋಗಿದ್ದೇನೆ.

ಶ್ರೀ ಶ್ರೀರಂಗದೇವರಾಯಲು: ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ಶಾಸಕರು ಬಹಳ ಕಾಳಜಿಯಿಂದ ಆಶ್ರಯ ಮನೆಗಳನ್ನು ಕೇಳುತ್ತಿದ್ದಾರೆ. ಆದರೆ ನನಗೆ 1994ರಿಂದ 1999ರವರೆಗೆ ಮನೆ ಕೊಟ್ಟಿಲ್ಲ. ನಾನು ಬಹಳಷ್ಟು ಪ್ರಯತ್ನ ಮಾಡಿದರೂ ನನ್ನ ಕ್ಷೇತ್ರದಲ್ಲಿ ನನಗತ ಒಂದು ಮನೆ ಕೂಡ ನನಗೆ ಕಟ್ಟುವುದಕ್ಕೆ ಆಸ್ಪದ ಕೊಟ್ಟಿಲ್ಲ. ಅವರು ಅಲ್ಲೆ ಕುಳಿತು ನನಗೆ ಆಶ್ರಯ ಮನೆಗಳನ್ನು ಕಟ್ಟುವುದಕ್ಕೆ ಅವಕಾಶ ಕೊಡಿ ಎಂದು ಕೇಳುವುದು ಯಾವ ನ್ಯಾಯ ಎಂದು ಅವರನ್ನು ಕೇಳುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ: ಮಾನ್ಯ ಅಧ್ಯಕ್ಷರೆ, ಕಳೆದ ತಿಂಗಳು 26ರಂದು ಈ ರಾಜ್ಯದ ಮಾನ್ಯ ರಾಜ್ಯಪಾಲರು ಸದನದಲ್ಲಿ ಏನು ಭಾಷಣ ಮಾಡಿದ್ದಾರೆ, ಅದಕ್ಕೆ ಅದರ ಮಾರನೇ ದಿವಸದಿಂದ ಆ ಒಂದು ಭಾಷಣಕ್ಕೆ ವಂದನಾ ನಿರ್ಣಯವನ್ನು ತರಬೇಕೆಂದು ಇದೆ, ಆ ಒಂದು ಕಾರ್ಯಕ್ರಮವನ್ನು ಪ್ರತಿದಿವಸ ಸೇರಿಸಿಕೊಂಡು ಬರುತ್ತಿದ್ದೀರಿ. ನಾನು ನಿಯಮಾವಳಿ ಪುಸ್ತಕವನ್ನು ತೆಗೆದುಕೊಂಡು ನೋಡಿದೆ. ಈ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಾಡುವುದಕ್ಕಿಂತ ಮೊದಲು

ಬೇರೆ ವಿಷಯಗಳನ್ನು ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೇ ಎಂದು. ಇದೆ ಆದರೆ ಯಾವುದು ಎಂದರೆ, it is only in exceptional cases, not in the normal course. ಆದರೆ ತಾವು 69ನೇ ನಿಯಮಾವಳಿ ಪ್ರಕಾರ ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಚರ್ಚೆ ಮಾಡುವುದಕ್ಕೆ ಈ ಸದನದಲ್ಲಿ ಒಂದು ವಾರದ ಕಾಲ ಮಾತನಾಡುವುದಕ್ಕೆ ಅವಾಶ ಮಾಡಿಕೊಟ್ಟಿದ್ದೀರಿ. ಒಬ್ಬ ರೈತನಾಗಿ, ರೈತನ ಹಿತೈಷಿಯಾಗಿ ಅದನ್ನು ನಾನು ವಿರೋಧ ಮಾಡುವುದಿಲ್ಲ. ಆದರೆ ನನ್ನ ಪ್ರಶ್ನೆ ಏನೆಂದರೆ ಇದಾದ ಮೇಲೆ ಈಗ ಆಶ್ರಯ ಮನೆಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನನ್ನ ಸ್ನೇಹಿತರ ಕೋರಿಕೆ. ಅದಕ್ಕೂ ನನ್ನ ಅಡ್ಡಿಯೇನಿಲ್ಲ. ನನ್ನ ಕಷ್ಟ ಏನೆಂದರೆ ಪ್ರತಿ ದಿವಸ ಇಲ್ಲಿ ಬಂದು ಕುಳಿತುಕೊಂಡು ಇವತ್ತು ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ಮೂವ್ ಮಾಡಬೇಕು, ತೆಗೆದುಕೊಳ್ಳುತ್ತಾರೆ ಎಂದು ಕಾಯುತ್ತಿದ್ದೇನೆ. ಇಲ್ಲ ಇಂತಹ ಸಮಯ ಎಂದು ನಿಗದಿ ಮಾಡಿ, ಕುಳಿತುಕೊಳ್ಳುತ್ತೇನೆ. ನಾನು ಊರಾನೂ ಮಾಡದೆ, ಒಂದು ಗಳಿಗೆ ಎದ್ದೂ ಹೋಗದೆ ನನ್ನಷ್ಟಕ್ಕೆ ನಾನೇ ಈ ಸದನದಲ್ಲೆ ಕಟ್ಟಿ ಹಾಕಿಕೊಳ್ಳುವ ಪರಿಸ್ಥಿತಿಯಲ್ಲಿ ನಾನಿಲ್ಲ. ಆದುದರಿಂದ ದಯವಾಡಿ ನಾನು ನಿಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಒಂದು ನಿಗದಿತವಾದಂತಹ ಸಮಯವನ್ನು ಗೊತ್ತು ಮಾಡಿ ನೀವು ಯಾವುದೇ ವಿಷಯವನ್ನಾದರೂ ಚರ್ಚೆ ಮಾಡಿ. ಇದು ಒಂದು ವಿಚಾರ. The chair is supreme ತಾವು ತೆಗೆದುಕೊಳ್ಳುವಂತಹ ತೀರ್ಮಾನಕ್ಕೆ ನಾನು ಸೇರಿದ ಹಾಗೆ ಯಾಗಿಗೂ ಕೂಡ ಪ್ರಶ್ನೆ ಮಾಡುವುದಕ್ಕೆ ಅಧಿಕಾರ ಇಲ್ಲ. ಆದರೆ ಯಾವುದನ್ನಾದರೂ ತೆಗೆದುಕೊಳ್ಳುವಾಗ, ಆ ಒಂದು ಚರ್ಚೆಯಿಂದ, ತೀರ್ಮಾನದಿಂದ ನಿಮ್ಮ ಒಂದು ನಿಯಮಾವಳಿಗಳಿಂದ ಯಾರಿಗಾದರೂ ಉಪಯೋಗವಾಗಬೇಕಲ್ಲ. ಇವತ್ತು ಆಶ್ರಯ ಮನೆಗಳ ಚರ್ಚೆ ಮಾಡುವುದಕ್ಕೆ ನನ್ನ ಸ್ನೇಹಿತರು ಅವಕಾಶ ಕೇಳುತ್ತಿದ್ದಾರೆ. ಈ ಆಶ್ರಯ ಮನೆಗಳ ಚರ್ಚೆ ಮಾಡುವುದಕ್ಕೆ ವಿಫುಲವಾದ ಅವಕಾಶ ರಾಜ್ಯಪಾಲರ ಭಾಷಣದಲ್ಲಿ ಬರುತ್ತದೆ. ನಿಯಮ 69ರ ಕೆಳಗೆ ಕೃಷಿ ಉತ್ಪನ್ನಗಳ ಬೆಲೆ ಕುಸಿತದ ಬಗ್ಗೆ ಈ ನಾಡಿನ ರೈತರು ಬೀದಿ ಪಾಲಾಗಿದ್ದಾರೆ ಎನ್ನುವ ವಿಷಯ ಕೂಡ ರಾಜ್ಯಪಾಲರ ಭಾಷಣದ ಐದನೇ ಕಲಮಿನಿಂದ ಹತ್ತನೇ ಕಲಮಿನವರೆಗೆ ಹೇಳಿದ್ದಾರೆ. ಅದರ ಬಗ್ಗೆ ಕೂಡ ವಿಫುಲವಾದ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಇದನ್ನೆಲ್ಲಾ ಹೊರತುಪಡಿಸಿ ತಾವು ಯಾವ ವಿಷಯದ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದೆಯೋ ಆ ವಿಷಯಗಳನ್ನು ಮತ್ತೆ ಚರ್ಚೆ ಮಾಡುವುದಕ್ಕೆ ಕೊಡುವುದು ಸೂಕ್ತವಲ್ಲ. ಅದಕ್ಕಾಗಿ ನಾನು ಹೇಳಿದ್ದು, ಕುದುರೆ ಮುಂದೆ ಗಾಡಿ ಕಟ್ಟುತ್ತೀರೋ, ಅಥವಾ ಗಾಡಿ ಮುಂದೆ ಕುದುರೆ ಕಟ್ಟುತ್ತೀರೋ ಎಂದು. ಎಲ್ಲಾ ವಿಷಯಗಳನ್ನು ಬೇರೆ ಬೇರೆ ರೀತಿಯಲ್ಲೇ ಚರ್ಚೆ ಮಾಡಿದ ಮೇಲೆ ಮತ್ತೆ ರ್ಯಾಪಾಲರ ಭಾಷಣದಲ್ಲಿ ಚರ್ಚೆ ಮಾಡುವುದಕ್ಕೆ ಏನು ಇರುತ್ತದೆ ಸ್ವಾಮಿ? ನೀವು ಆಶ್ರಯಮನೆಗಳ ಬಗ್ಗೆ ಚರ್ಚೆ ಮಾಡಿಸಿಬಿಡಿ. ನೀರಾವರಿ ಬಗ್ಗೆ ಚರ್ಚೆ ಆಡಿಸಿಬಿಡಿ. ಆದಾದಮೇಲೆ ಕೃಷಿ ಉತ್ಪನ್ನ ಮಾರುಕಟ್ಟೆ ಬಗ್ಗೆ ಚರ್ಚೆ ಮಾಡಿಸಿಬಿಡಿ. ಏನು? ಚರ್ಚೆ ಆಡುವುದಕ್ಕೆ ಎನು ಉಳಿಯುತ್ತದೆ? ಅದಕ್ಕಾಗಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಯಾವುದಾದರೂ ವಿಷಯ ರಾಜ್ಯಪಾಲರ ಭಾಷಣದಲ್ಲಿ ಚರ್ಚೆಗೆ ಅವಕಾಶ ಇಲ್ಲದೆ ಇದ್ದರೆ, ಅದಕ್ಕೆ ನಾನು ಒಪ್ಪುತ್ತೇನೆ, ಚರ್ಚೆ ಮಾಡಲಿ. ಆದರೆ ರಾಜ್ಯಪಾಲರ ಭಾಷಣದಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಇದ್ದರೆ ಅದಕ್ಕೆ ಈಗ ತಾವು

ಅವಕಾಶ ಕೊಡುವುದು ಸಮ್ಮತವಲ್ಲವೇನೋ ಎಂದೆನ್ನಿಸುತ್ತದೆ. ಆದುದರಿಂದ ದಯಮಾಡಿ ಅಂತಹ ಚರ್ಚೆಗೆ ಅವಕಾಶ ಮಾಡಿಕೊಡದೆ ಈ ರೆಸಲ್ಯೂಷನ್ ಮೂವ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಇಷ್ಟೊಹೊತ್ತು ಮಾನ್ಯ ವೈ. ಕೆ. ರಾಮಯ್ಯನವರು ನಮಗೆ ಹಿತೋಕ್ತಿಯನ್ನು ಹೇಳಿದ್ದಾರೆ. ಬಹಳ ಚೆನ್ನಾಗಿ ಮಾರ್ಗದರ್ಶನವನ್ನು ಮಾಡಿದ್ದಾರೆ. ಅದಕ್ಕೆ ನಾನು ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅವರು ಈ ಹಿತೋಕ್ತಿಯನ್ನು ಇಲ್ಲೆ ಕುಳಿತಿರತಕ್ಕಂಥ ಅವರ ಸ್ನೇಹಿತರು ಮೊನ್ನೆ ಇಲ್ಲಿ ಬಂದಿದ್ದರಲ್ಲ ಆಗ ಹೇಳಬೇಕಾಗಿತ್ತು. ಅವರು ಯಾವ ಉಪದೇಶ ಹೇಳಿದರೋ.

ಅಧ್ಯಕ್ಷರು : ಮಾನ್ಯ ಬೈರೇಗೌಡರೇ, ಅದೆಲ್ಲಾ ಬೇಡ. ಎಲ್ಲಿಂದ ಎಲ್ಲಿಗೋ ಹೋಗುತ್ತಿದ್ದೀರಿ. ಅದೆಲ್ಲಾ ಮುಗಿದ ಅಧ್ಯಾಯ.

ಶ್ರೀ ಸಿ. ಬೈರೇಗೌಡ : ಇವತ್ತು ನಮಗೆ ಬುದ್ಧಿವಾದ ಹೇಳುವುದಕ್ಕೆ ಬಂದಿದ್ದಾರೆ. ಆಗ ಎಲ್ಲಿ ಹೋಗಿತ್ತು? ಈ ವರ್ಷದ ಸದಸ್ಯರುಗಳಿಗಿಂತ ಮೊದಲು ಅವರು ಇಲ್ಲಿಗೆ ಬಂದಿದ್ದರೆ.

(ಗೊಂದಲ)

ಅಧ್ಯಕ್ಷರು : ಆ ಪ್ರಶ್ನೆ ಈಗ ನಮ್ಮ ಮುಂದೆ ಇಲ್ಲ. ಮಾನ್ಯ ಶೆಟ್ಟರ್ ಅವರೆ, ತಾವು ಏನು ಹೇಳಬೇಕೆಂದು ಇದ್ದೀರಿ ಅದನ್ನು ಹೇಳಿ.

(ಗೊಂದಲ)

ಶ್ರೀ ಬಿ. ಹೆಚ್. ಬನ್ನಿಕೋಡ್ : ರಾಜ್ಯಪಾಲರ ಭಾಷಣದ ಬಗ್ಗೆ ಚರ್ಚೆ ನಡೆಯುತ್ತಿಲ್ಲ ಬರೀ ಬೇರೆ ವಿಷಯಗಳ ಬಗ್ಗೆ ಚರ್ಚೆ ನಡೆಯುತ್ತಿದೆ.

ಶ್ರೀ ವೈ. ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಬೈರೇಗೌಡ ನನ್ನ ಹೆಸರನ್ನು ಎತ್ತಿದ್ದರಿಂದ ನಾನು ಒಂದು ಮಾತು ಹೇಳಬೇಕಾಗುತ್ತದೆ. ಮೊದಲನೆ ದಿವಸ ಅವರ ಸ್ನೇಹಿತರು ನಡೆದುಕೊಂಡ ನಡವಳಿಕೆ ಬಗ್ಗೆ ಬುದ್ಧಿ ಹೇಳಿ ಎಂದು ನನಗತ ಅಪ್ಪಣೆ ಕೊಡಿಸಿದ್ದಾರೆ. ಮೊದಲನೆ ದಿವಸ ನನ್ನ ಸ್ನೇಹಿತರು ಈ ಕಡೆಯಿಂದ ಬಾವಿಯೊಳಗೆ ಹೋಗಿ ಏನೂ ಅಪರಾಧವನ್ನು ಮಾಡಿಲ್ಲ.

ಶ್ರೀ ಡಿ. ಬಿ. ಸದಾನಂದಗೌಡ : ಮಾನ್ಯ ಅಧ್ಯಕ್ಷರೆ, ತಾವು ಮುಗಿದ ಅಧ್ಯಯ ಎಂದು ಬೈರೇಗೌಡರಿಗೆ ಅವಕಾಶ ಕೊಡದೇ, ಈಗ ಮತ್ತೆ ಅವರಿಗೆ ಏಕೆ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡುತ್ತಿದ್ದೀರಿ?

ಅಧ್ಯಕ್ಷರು : ಆ ಪ್ರಶ್ನೆ ನಮ್ಮ ಮುಂದೆ ಇಲ್ಲ. ಮಾನ್ಯ ಬೈರೇಗೌಡರು ಎತ್ತಿದ್ದರಿಂದ ಅದಕ್ಕೆ ಅವರು ಉತ್ತರ ಕೊಡುತ್ತಿದ್ದಾರೆ. ಅವರು ಎತ್ತದೆ ಇದ್ದರೆ ಅವಕಾಶ ಇರುತ್ತಿರಲಿಲ್ಲ.

ಶ್ರೀ ಡಿ. ಬಿ. ಸದಾನಂದಗೌಡ : ತಾವು ಮುಗಿದ ಅಧ್ಯಾಯ ಎಂದು ಆದೇಶ ಮಾಡಿದ ಮೇಲೆ ಆ ಆದೇಶದ ವಿರುದ್ಧ ಏಕೆ ಮಾತನಾಡುವುದು?

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ : ಅವರು ನನಗೆ ಹೇಳಿದ್ದರಿಂದ ನಾನು ಅವರಿಗೆ ಹೇಳಬೇಕಾಗುತ್ತದೆ. ಅವರು ಯಾವ ಅಪರಾಧವನ್ನು ಮಾಡಿಲ್ಲ. ನಾನು ಮೊಟ್ಟಮೊದಲಿಗೆ ಈ ಸದನದ ಸದಸ್ಯ. ನಾನು ರೂಲ್ಸ್ ನೋಡಿದೆ. ಸದಸ್ಯ ಎಂದರೆ ವಿಧಾನಸಭೆ ಸದಸ್ಯ. ನಾನು ಅಷ್ಟೆ, ನಾನು ನನ್ನ ಪಕ್ಷದ ನಿಯಮಾವಳಿಗೆ ವಿರುದ್ಧವಾಗಿ ನಡೆದುಕೊಂಡಿದ್ದರೆ ಅಥವಾ ಸರ್ಕಾರದ ವಿರುದ್ಧವಾಗಿ ನಡೆದುಕೊಂಡಿದ್ದರೆ ನಮ್ಮ ಪಕ್ಷ ಅದಕ್ಕೆ ಕ್ರಮ ತೆಗೆದುಕೊಳ್ಳುತ್ತದೆ; ಅಧ್ಯಕ್ಷರಲ್ಲ. ನಾನು ಮೊಟ್ಟಮೊದಲಿಗೆ ಈ ಸದನದ ಸದಸ್ಯ. ಆಮೇಲೆ ನಾನು ಕಾಂಗ್ರೆಸ್ ಪಕ್ಷದ ಸದಸ್ಯ. ನಾನು ಪಕ್ಷವನ್ನು ಇಲ್ಲಿ ಪ್ರತಿನಿಧಿಸುವುದಿಲ್ಲ. ನಾನು ಒಬ್ಬ ಸಾಮಾನ್ಯ ಸದಸ್ಯನಾಗಿ ನನ್ನ ಕ್ಷೇತ್ರದ ನಾಡಿನ ಜನರ ದುಃಖ ದುಮ್ಮಾನ ಎಲ್ಲಾ ನೋಡಿ ಸರಿ ಮಾಡುವುದಕ್ಕೆ ಬಾವಿಗೆ ಹೋಗಬಲ್ಲೆ ಪ್ರತಿಭಟನೆ ಮಾಡಬಲ್ಲೆ. ಅದರಲ್ಲಿ ಅಪರಾಧ ಏನಿಲ್ಲ. ಹಾಗಾಗಿ ಮಾನ್ಯ ಭೈರೇಗೌಡರು ಈ ವಿಷಯದಲ್ಲೆ ನನಗತ ಬುದ್ಧಿವಾದ ಹೇಳುವ ಅವಶ್ಯಕತೆ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಯ್ಯನವರು ಹೇಳಿದ ಹಾಗೆ ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಬಗ್ಗೆ ಎಲ್ಲಾ ವಿಷಯಗಳನ್ನು ಪ್ರಸ್ತಾಪ ಮಾಡಬೇಕು ಎಂದು ಹೇಳಿದರು. ಪ್ರತ್ಯೇಕವಾಗಿ ವಿಷಯ ಚರ್ಚೆ ಮಾಡುವುದು ಬೇಡ ಎಂದು ಹೇಳಿದರು. ಆದರೆ ಕೆಲವೊಂದು ವಿಷಯಗಳು ಅದರ ಮಹತ್ವಗಳನ್ನು ಅರಿತು, ರೈತರ ವಿಚಾರದ ಬಗ್ಗೆ ಪ್ರಾಮುಖ್ಯತೆ ಬರಬೇಕು ಎನ್ನುವ ದೃಷ್ಟಿಯಿಂದ ಹಾಗೂ ಸರ್ಕಾರ ಅದಕ್ಕೆ ತಕ್ಷಣ ಕ್ರಮಗಳನ್ನು ತೆಗೆದುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ನಿಲುವಳಿ ಸೂಚನೆ ಮುಖಾಂತರ ತರಬೇಕಾಗುತ್ತದೆ. ಅದು ಅನಿವಾರ್ಯ. ಅದಕ್ಕೋಸ್ಕರ ಆ ಒಂದು ವಿಷಯದ ಬಗ್ಗೆ ಸಾಕಷ್ಟು ಚೆನ್ನಾಗಿ ಚರ್ಚೆಯಾಗಿದೆ. ಅದರ ಬಗ್ಗೆ ಸರ್ಕಾರ ಸ್ಪಂದಿಸಬೇಕಾಗುತ್ತದೆ. ಎಲ್ಲಾ ವಿಷಯಗಳನ್ನು ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಬೇಕು ಎನ್ನುವ ಮಾನ್ಯ ರಾಮಯ್ಯನವರ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ.

ಅಧ್ಯಕ್ಷರು : ಈಗ ನಮ್ಮ ಮುಂದೆ ಎರಡು ವಿಷಯ ಇದೆ. ಒಂದು ರಾಜ್ಯಪಾಲರ ಭಾಷಣಕ್ಕೆ ಬೇಗನೆ ಪ್ರಪೋಸಗ ಮಾಡುವುದಕ್ಕೆ ಸಮಯ ಕೊಡಲಿಲ್ಲವೆಂದು ಮಾನ್ಯ ರಾಮಯ್ಯನವರು ಎತ್ತಿದ್ದಾರೆ. ಆದರೆ ಇವರು ಮೊದಲು ನಿಲುವಳಿ ಸೂಚನೆ ತಂದಿದ್ದರಿಂದ ಅದನ್ನು ನಾವು ಅಲೋ ಮಾಡಿ ನಂತರ ರೂಲ್ 69ರ ಕೆಳಗೆ ಚೇಂಜ್ ಮಾಡಿದ್ದು. ಇನ್ನೊಂದು ಕಡೆ ಮಾನ್ಯ ನಿಂಧ್ಯರವರು ಎತ್ತಿದ್ದು ಏನೆಂದರೆ, ಅರ್ಧ ಗಂಟೆ ಚರ್ಚೆ ಐದೂವರೆ ಗಂಟೆಗೆ ಏನು ಹಾಕಿಕೊಂಡಿದ್ದೀರಿ, ಆ ಸಬ್ಜೆಕ್ಟ್ ಬದಲಿಗೆ ಈ ಸಬ್ಜೆಕ್ಟ್ ತೆಗೆದುಕೊಳ್ಳಿ ಎಂದು ಅವರು ಹೇಳಿದ್ದು. ಅವರು ಈಗಾಗಲೇ ತೆಗೆದುಕೊಳ್ಳಬೇಕೆಂದು ಹೇಳುತ್ತಿಲ್ಲ. ಐದೂವರೆ ಗಂಟೆಗೆ ಅರ್ಧ ಗಂಟೆ ಚರ್ಚೆ ಸಮಯದಲ್ಲಿ ಸ್ವಚ್ಛ ಗ್ರಾಮದ ಬದಲಿಗೆ ಈ ವಿಚಾರವನ್ನು ತೆಗೆದುಕೊಳ್ಳಿ ಎಂದು ಹೇಳಿದರು. ಇನ್ನು ಮೂರನೇಯದಾಗಿ ನಿನ್ನೆ ದಿವಸ ಸಂಜೆ ಇಲ್ಲಿ ಏನು ತೀರ್ಮಾನವಾಗಿದೆ ಎಂದರೆ ಇನ್ನು ಇಲ್ಲೆ ಮಾತನಾಡುವವರು ಜಾಸ್ತಿ ಜನ ಇದ್ದಾರೆ. ಇದನ್ನು ಒಂದು ಗಂಟೆ ಕಾಲ ಇವತ್ತು ಹೆಚ್ಚಿಗತ ಮಾತನಾಡುವುದಕ್ಕೆ ಮಾನ್ಯ ಖಿರ್ಗೆಯವರು ಒಪ್ಪಿದ್ದಾರೆ. ನಾಲ್ಕೂವರೆ ಒಳಗೆ ಸರ್ಕಾರ ರಿಪ್ಲೈ ಮಾಡಿ, ನಾಲ್ಕೂವರೆ ಮೇಲೆ ನಿಮ್ಮ ವಿಷಯ ಪ್ರಾರಂಭ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ : ರಾಮಯ್ಯನವರು ಊಟ ಮಾಡಿಕೊಂಡು ಬರಲಿ ಸ್ವಾಮಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಆಶ್ರಯ ಸಮಿತಿ ವಿಚಾರದಲ್ಲಿ ನಾನು ಏಕೆ ಆದ್ಯತೆ ಕೊಡಬೇಕು ಎಂದರೆ ಈಗ ಆಶ್ರಯ ಸಮಿತಿ ಬಗ್ಗೆ ವಸತಿ ಸಚಿವರು ಮಾರಿದ್ದಾರೆ ಅವರು ಬಹುಮತ ತೆಗೆಯುತ್ತೇವೆ ಎಂದರೆ ಅದರ ಬಗ್ಗೆ ಚರ್ಚೆ ಅವಶ್ಯಕತೆ ಇಲ್ಲ. ಸರ್ಕಾರದ ವಿರುದ್ಧ ಇದರ ಬಗ್ಗೆ ನಮ್ಮ ತೀವ್ರ ಪ್ರತಿಭಟನೆಯನ್ನು ವ್ಯಕ್ತಮಾಡುತ್ತಿದ್ದೇನೆ. ಈಗ 12ನೇ ತಾರೀಖು ಸಭೆ ಇದೆ. ಶಾಸಕರುಗಳಿಗೆ ನಾವು ಏನು ಮಾಡಬೇಕು ಸ್ವಾಮಿ? ಅದಕ್ಕೋಸ್ಕರ ನಾನು ಸರ್ಕಾರದ ಧೋರಣೆ ಏನಿದೆ, ಎಂಬುದನ್ನು ಕೇಳುವುದಕ್ಕೋಸ್ಕರ ಇದರ ಬಗ್ಗೆ ಚರ್ಚೆಯಾಗಬೇಕೆಂದು ಕೇಳುತ್ತಿದ್ದೇನೆ.

1. 10 ಪಿ.ಎಂ.

ಈಗ ಇದನ್ನು ಬಹುಮತದಿಂದ ಮಾಡಬೇಕೆಂದು ಮಾಡಿದ್ದಾರೆ, ಇದನ್ನು ಮಾನ್ಯ ಮಂತ್ರಿಯವರು ಸರ್ಕ್ಯೂಲರ್ ಮಾಡಿಕಳುಹಿಸಿದ್ದಾರೆ, ಸಭೆಯಲ್ಲಿ ಮಾನ್ಯ ಮಂತ್ರಿಯವರೇ ಇದ್ದಾರೆ ಹೇಳಿ, ಅದರಲ್ಲಿ ಬಹುಮತ ಎಂದು ಇದೆ.

ಅಧ್ಯಕ್ಷರು : ಅರ್ಧ ಗಂಟೆಯ ಕಾಲ ಚರ್ಚೆಗೆ ತೆಗೆದುಕೊಳ್ಳುತ್ತೇವೆಲ್ಲಾ, ಆಗ ಇದನ್ನು ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಹಾಗಾದರೆ 12ನೇ ತಾರೀಖಿನಂದು ಇರುವಂತಹ ಸಭೆಯನ್ನು ಮುಂದಕ್ಕೆ ಹಾಕಿಸಿ.

ಅಧ್ಯಕ್ಷರು : ಮಾನ್ಯ ಸಿಂಧ್ಯರವರೇ, ಸರ್ಕಾರದವರು ಇವತ್ತೇ ಒಪ್ಪಿದರೆ ಇವತ್ತೇ ಚರ್ಚೆಗೆ ತೆಗೆದುಕೊಳ್ಳೋಣ, ಅದಕ್ಕೆ ಏನು ಅಬ್ಜೆಕ್ಷನ್ ಇಲ್ಲ. ಈಗ ಅರ್ಧ ಗಂಟೆತ ಚರ್ಚೆ ಮಂಗಳವಾರ ಮತ್ತು ಗುರುವಾರದಂದು ಇದೆ. ಇವತ್ತು ಒಂದು ಸಬ್ಜೆಕ್ಟ್ ಇದೆ, ಸರ್ಕಾರದವರು ಒಪ್ಪಿದರೆ ಅದನ್ನು ಇವತ್ತೇ ಚರ್ಚೆಗೆ ತೆಗೆದುಕೊಳ್ಳೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಮಗೆ ಸದನದ ಸಮಯವನ್ನು ಹಾಳು ಮಾಡುವ ಇಚ್ಛೆ ಇಲ್ಲ, ಸರ್ಕಾರದವರು ಈಗ ಬಹುಮತವನ್ನು ತೆಗೆಯುತ್ತೇವೆಂದು ಹೇಳಲಿ, ಆಗ ಚರ್ಚೆ ಮಾಡುವಂತಹ ಅವಶ್ಯಕತೆ ಇರುವುದಿಲ್ಲ. ಮಾನ್ಯ ವೈ.ಕೆ. ರಾಮಯ್ಯನವರು ಈಗ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯವನ್ನು ಮಂಡನೆ ಮಾಡಲಿ, ಇಲ್ಲವೆಂದರೆ 12ನೇ ತಾರೀಖಿನ ಸಭೆಯನ್ನು ಮುಂದಕ್ಕೆ ಹಾಕಿಸಿ. ಈ ಸರ್ಕಾರದ ಧೋರಣೆ ಏನೆಂದು ಹೇಳಲಿ. ನೀವು ಬಹುಮತದಿಂದ ತೀರ್ಮಾನ ಮಾಡುತ್ತೇವೆಂದು ಹೇಳಿ ಮಾರ್ಚ್ 31ನೇ ತಾರೀಖಿನೊಳಗೆ ಬೆನಿಫಿಶೀಯರ್ಸ್‌ಗಳನ್ನು ಕೊಡಬೇಕಾಗಿದೆ. ನಾಳೆ ದಿವಸ ಎಪ್ಪತ್ತು ಜನ ವಿರೋಧಪಕ್ಷದ ಶಾಸಕರು ನೀವು ಬೇಜವಾಬ್ದಾರಿಯಿಂದ ನಡೆದುಕೊಂಡಿದ್ದೀರೆಂದು ಹೇಳಿದರೆ, ನಾವು ನಮ್ಮ ಕ್ಷೇತ್ರದಲ್ಲಿ ಹೇಗೆ ತಲೆ ಎತ್ತಿಕೊಂಡು ತಿರುಗಾಡುವುದು.

ಅಧ್ಯಕ್ಷರು : 6-7 ಜನರು ಒಟ್ಟಿಗೆ ಮಾತನಾಡುತ್ತಿದ್ದಾರೆ, ಪರದಿಯನ್ನು ಮಾಡಬೇಕು.

(ಅಧ್ಯಕ್ಷರ ಆದೇಶದ ಮೇರೆಗೆ ನಡವಳಿಕೆ ದಾಖಲು ಮಾಡಿಲ್ಲ)

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ನಾವು ವಿರೋಧಪಕ್ಷದಲ್ಲಿದ್ದಂತಹ ಸಂದರ್ಭದಲ್ಲಿ ನಮಗೆ ಆ ರೀತಿಯಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆಯೇ? ಹಿಂದೆಯೂ ಆ ರೀತಿಯಾಗಲು ಸಾಧ್ಯವಾಗಿಲ್ಲ, ಏಕೆಂದರೆ ನಾವು ಹೇಳಿದಂತಹ ಸದಸ್ಯರುಗಳನ್ನು ನಾಮಕರಣ ಮಾಡುವುದರ ಬಗ್ಗೆ ಸರ್ಕಾರ ಆಸಕ್ತಿಯನ್ನು ತೋರಿಸಲಿಲ್ಲ. ಇಲ್ಲಿ ಮಾನ್ಯ ಹಿರಿಯ ಸದಸ್ಯರುಗಳಾದ ಸಿಂಧ್ಯರವರು ಇದ್ದಾರೆ, ಮಾನ್ಯ ಎಸ್. ಎಸ್. ಪಾಟೀಲ್‌ರವರು ಇದ್ದಾರೆ, ಮತ್ತೆ ಮಾನ್ಯ ಬೈರೇಗೌಡರು ಇದ್ದಾರೆ. ಇವರು ಈಗ ತೊಂದರೆಯಾಗುತ್ತದೆ, ಎಂದು ಹೇಳುತ್ತಿದ್ದಾರೆ, ಹಿಂದೆ ಇದೇ ರೀತಿಯಲ್ಲಿ ತೊಂದರೆಯಾಗಿದ್ದು ಇವರಿಗೆ ಗೊತ್ತಿಲ್ಲವೇ?

ಅಧ್ಯಕ್ಷರು : ಸಭೆಯಲ್ಲಿ ಒಟ್ಟಿಗೆ 5-6 ಜನರು ಮಾತನಾಡಿದರೆ ನಡವಳಿಕೆ ಮಾಡಬೇಡಿ, ನಾನು ಯಾರ ಹೆಸರನ್ನು ಹೇಳುತ್ತೇನೋ ಅವರ ಭಾಷಣವನ್ನು ವರದಿ ಮಾಡಿ.

(ಗೊಂದಲ)

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ವರದಿ ಮಾಡಿಲ್ಲ)

ಅಧ್ಯಕ್ಷರು : ನಾವು ಅದೇ ಪ್ರಶ್ನೆಯನ್ನು ಸರ್ಕಾರದವರನ್ನು ಕೇಳಿದ್ದೇವೆ. ಅವರು ಸಹ ಇದರ ಬಗ್ಗೆ ಸಚಿವರು ಡಿಸ್‌ಕಸ್ ಮಾಡುತ್ತಿದ್ದಾರೆ; ಅಷ್ಟರಲ್ಲಿ ನೀವು ಏಕೆ ಈ ರೀತಿ ಮಾಡುತ್ತಿರಿ? ಈಗ ಈ ವಿಷಯವನ್ನು ಇವತ್ತು ತೆಗೆದುಕೊಳ್ಳಬೇಕೋ ಸೋಮವಾರ ತೆಗೆದುಕೊಳ್ಳಬೇಕೋ ಎಂಬುದರ ಬಗ್ಗೆ ಹೇಳುತ್ತಾರೆ. ಮಾನ್ಯ ಚಂದ್ರೇಗೌಡರೇ, ಈ ವಿಷಯವನ್ನು ಇವತ್ತೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಸರ್ಕಾರದ ಅಭಿಪ್ರಾಯ ಏನು?

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಪಿ.ಜಿ.ಆರ್. ಸಿಂಧ್ಯರವರು ಹೇಳಿರುವಂಥಾದ್ದು, ಈ ಚರ್ಚೆಯ ಉದ್ದೇಶ ಏನು ಎಂಬುದನ್ನು ಆಗಲೇ ಹೇಳಿದ್ದಾರೆ. ಇಲ್ಲಿ ಬಹುಮತ ಮತ್ತು ಅಲ್ಪಮತ ಎಂಬ ಪ್ರಶ್ನೆ ಮಾತ್ರ ಇರುವಂಥಾದ್ದು. ಯಾವುದೇ ಪ್ರಜಾತಂತ್ರ ವ್ಯವಸ್ಥೆಯೊಳಗೆ ಇದಕ್ಕೆ ಮಾತ್ರ ಇರುವಂಥಾದ್ದು. ಯಾವುದೇ ಪ್ರಜಾತಂತ್ರ ವ್ಯವಸ್ಥೆಯೊಳಗೆ ಇದಕ್ಕೆ ಒಂದು ಸಮಿತಿಯೆಂದು ಮಾಡಿದ್ದೇವೆ. ಆ ಸಮಿತಿ ತಾನೇ ತೀರ್ಮಾನವನ್ನು ಮಾಡುವುದಿಲ್ಲ, ತನಗೆ ಬಂದಿರುವಂತಹ ರೆಕಮಂಡೇಷನ್ಸ್ ಗ್ರಾಮಸಭೆಗಳಲ್ಲಿ ಏನಿರುತ್ತವೆ, ಅದನ್ನು ಕುಳಿತು ಪರಿಶೀಲನೆ ಮಾಡುತ್ತದೆ. ಈಗ ನಾನು ಹೇಳುವಂಥಾದ್ದು ಇಲ್ಲಿ ಬಹುಮತ, ಅಲ್ಪಮತದ ಬಗ್ಗೆ ತೀರ್ಮಾನವಾಗುತ್ತದೆ. ಅಲ್ಲೂ ಬಹುಮತ, ಅಲ್ಪಮತ, ಎಂಬುದರ ಬಗ್ಗೆ ತೀರ್ಮಾನ ಮಾಡದೇ ಹೋದರೆ ಈ ಸಮಸ್ಯೆಯನ್ನು ಬಗೆಹರಿಸುವುದು ಹೇಗೇ? ಇದಕ್ಕೆ ಏನಾದರೂ ಒಂದು ಮಾರ್ಗ ಬೇಕಲ್ಲಾ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ನನ್ನದು ಒಂದು ಪಾಯಿಂಟ್ ಆಫ್ ಆರ್ಡರ್ ಇದೆ. ಈಗ ಈ ಸದನದ ಸದಸ್ಯರಿಗೂ, ನಾಮಿನೇಷನ್ ಸದಸ್ಯರಿಗೂ ತಾವು ಏನು ಹೋಲಿಕೆ ಮಾಡುತ್ತಿದ್ದೀರಲ್ಲಾ, ಇದು ಪ್ರಜಾಪ್ರಭುತ್ವದ ನೀತಿಗತ ಎಷ್ಟರಮಟ್ಟಿಗೆ ಅನುಗುಣವಾಗಿದೆ ಎಂಬುದನ್ನು ನೋಡಬೇಕಾಗುತ್ತದೆ. ನಾವು ಇಲ್ಲಿ ಚುನಾಯಿತ ಸದಸ್ಯರುಗಳಾಗಿದ್ದೇವೆ, ನೀವು

ನಾಲ್ಕು ಜನರನ್ನು ಒಂದೇ ಪಕ್ಷದ ಸದಸ್ಯರುಗಳನ್ನು ನಾಮಿನೇಷನ್ ಮಾಡಿಕೊಂಡು ಅದರಲ್ಲೇ ಬಹುಮತ ಎಂದು ಹೇಳಿದರೆ ಅದು ಎಷ್ಟರಮಟ್ಟಿಗೆ ಸಮಂಜಸವಾಗುತ್ತದೆ? ಇಲ್ಲಿ ನಾವು ಚುನಾಯಿತ ಸದಸ್ಯರುಗಳು, ಇವರನ್ನು ನಾಮಿನೇಷನ್ ಸದಸ್ಯರುಗಳಿಗತ ಹೋಲಿಕೆ ಮಾಡುವಂಥಾದ್ದು ಸರಿಯೇ? ತಾವು ನಿಮ್ಮ ಪಕ್ಷದ ಅರ್ಧ ಭಾಗ ಜನರನ್ನು ಕಾರ್ಯಕರ್ತರನ್ನು ಮಾಡಿ, ನಮ್ಮ ಪಕ್ಷದ ಅರ್ಧ ಭಾಗ ಜನರನ್ನು ಕಾರ್ಯಕರ್ತರನ್ನಾಗಿ ಮಾಡಿ. ಆಗ ಒಮ್ಮತದ ಅಭಿಪ್ರಾಯ ಮೂಡುತ್ತದೆ.

(ಗೊಂದಲ)

ಶ್ರೀ ಸಿ.ಆರ್.ಸಗೀರ್ ಅಹಮದ್ : ಹಿಂದೆ ತಾವು ಸಚಿವರಾಗಿದ್ದಂಥವರು, ಈ ವ್ಯವಸ್ಥೆಯನ್ನು ಮಾಡಿದ್ದೀರಾ? ಎಂಬುದು ಒಂದು ಪ್ರಶ್ನೆಯಾಗುತ್ತದೆ. ಆಗ ನೀವು ನಮ್ಮ ಒಂದೂ ಬೇಡಿಕೆಯನ್ನು ಸಹ ಈಡೇರಿಸಲಿಲ್ಲ.

(ಗೊಂದಲ)

ಅಧ್ಯಕ್ಷರು : ನೀವು ಇದೇ ರೀತಿಯಲ್ಲಿ ಚರ್ಚೆಯನ್ನು ಮುಂದುವರೆಸಿದರೆ ಸಭೆಯನ್ನು ಮುಂದೂಡಬೇಕಾಗುತ್ತದೆ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ತಾವು ಹಿಂದೆ ಸರ್ಕಾರ ನಡೆಸಿದಂಥವರು, ವಿರೋಧ ಪಕ್ಷದವರು ಇದ್ದಂತಹ ಕ್ಷೇತ್ರದಲ್ಲಿ ಎಷ್ಟು ಜನ ಎಂ.ಎಲ್.ಎ ಗಳನ್ನು ಸದಸ್ಯರುಗಳನ್ನಾಗಿ ಮಾಡಿದ್ದೀರಿ?

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ಆಗ ಬಹುಮತವೆಂದು ಇರಲಿಲ್ಲ;

ಅಧ್ಯಕ್ಷರು : ಒಬೊಬ್ಬರೇ ಮಾತನಾಡಿ

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ಗೌರವಾನ್ವಿತ ಆಡಳಿತ ಪಕ್ಷದ ಸದಸ್ಯರುಗಳಲ್ಲಿ ಹಾಗೂ ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಜನತಾದಳದ ಸರ್ಕಾರದ ಆಳ್ವಿಕೆಯ ಕಾಲದಲ್ಲಿ ಆಶ್ರಯ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥ ಅನುಸರಿಸುವುದಾದಲ್ಲಿ, ಇದರ ಚರ್ಚೆಯೂ ಅನಗತ್ಯವೆಂದು ಹೇಳುತ್ತೇನೆ.

ಶ್ರೀ ಸಿ.ಎಂ. ಲಿಂಗಪ್ಪ : ಮಾನ್ಯ ಅಧ್ಯಕ್ಷರೆ, ಜನತಾ ದಳದ ಸರ್ಕಾರ೨ರುವಾಗ ಅವರು ಒಂದೂ ಆಶ್ರಯ ಮನೆಗಳನ್ನು ಕೊಡಲಿಲ್ಲ. ಒಂದು ಗ್ರಾಮ ಪಂಚಾಯಿತಿಗೆ ಒಂದೋ ಎರಡೋ, ಮನೆಗಳನ್ನು ಕೊಡುತ್ತಿದ್ದರು, ನೀವು ಎಷ್ಟು ಕೊಟ್ಟಿದ್ದೀರಿ? ಈಗ ಜನರು ಆಶ್ರಯ ಮನೆಗಳು ನೀಗುತ್ತವೆ ಎಂದು ಬಹಳ ಸಂತೋಕ್ಷದಲ್ಲಿದ್ದಾರೆ. ಇದಕ್ಕೆ ಸಮಿತಿ ಮಾಡಿದೆ; ಅದನ್ನು ನಾವು ಕೊಡುತ್ತೇವೆ.

(ಗೊಂದಲ)

ಅಧ್ಯಕ್ಷರು : ಒಬ್ಬರಿಗೊಬ್ಬರು ಅಡ್ಜೆಸ್ಟ್ ಮಾಡಿಕೊಂಡು ಹೋಗಿ; ತಾವೆಲ್ಲಾ ಏಕೆ ಹೀಗೆ ಮಾಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈ ವಿಷಯ ಮೊನ್ನೆ ದಿವಸ ಚರ್ಚೆಗೂ ಬಂತು, ಆದುದರಿಂದ ತಾವು ದಯಮಾಡಿ ಎಲ್ಲಾ ಆಡಳಿತ ಪಕ್ಷದ ನಾಯಕರುಗಳನ್ನು, ವಿರೋಧ ಪಕ್ಷದ ನಾಯಕರುಗಳನ್ನು ಕರೆಸಿ ಇದರ ಬಗ್ಗೆ ಏನಾದರೂ ತೀರ್ಮಾನ ಮಾಡಿದರೆ ಒಳ್ಳೆಯದಾಗುತ್ತದೆ, ಇದರಲ್ಲಿ ಬಹಳ ಸಮಸ್ಯೆಗಳು ಇದೆ. ಇದರ ಬಗ್ಗೆ ತಾವು ಏನು ಮಾಡಬೇಕೆಂಬುದನ್ನು ತಿಳಿಸಬೇಕು.

ಅಧ್ಯಕ್ಷರು: ಹಾಗೆ ಹೇಳಿ, ಮಾನ್ಯ ಚಂದ್ರೇಗೌಡರೆ ಒಪ್ಪಿಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅಧ್ಯಕ್ಷರೆ, ಅವರ ಕಾಲದಲ್ಲಿ ಏನು ನಡೆಯಿತು ಎಂಬುದನ್ನು ಅವರು ಹೇಳಲಿ.

ಅಧ್ಯಕ್ಷರು : ಮಾನ್ಯ ಸಗೀರ್ ಅಹಮದ್‌ರವರೇ, ತಾವು ಕುಳಿತುಕೊಳ್ಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಸಗೀರ್ ಅಹಮದ್‌ರವರೆ, ನಾವು ಬಹಳ ಮಾತನಾಡಬಹುದು, ತಾವು ಆ ರೀತಿ ಮಾತನಾಡಬೇಡಿ, ನಮಗೆ ತಮ್ಮ ಬಗ್ಗೆ ಗೌರವವಿದೆ.

ಅಧ್ಯಕ್ಷರು : ಇವತ್ತು ನಾಲ್ಕು ಗಂಟೆಗೆ ಬಿ.ಎ.ಸಿ.ಮೀಟಿಂಗ್ ಇದೆ, ಅಲ್ಲಿ ಎಲ್ಲಾ ಪಕ್ಷದ ನಾಯಕರುಗಳು ಕುಳಿತುಕೊಂಡು ಮಾತನಾಡಿ, ನಂತರ ಆ ಸಬ್ಜೆಕ್ಟ್ ಬಗ್ಗೆ ಡಿಸ್‌ಕಸ್ ಮಾಡೋಣ. ಈಗ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಶೂನ್ಯ ವೇಳೆ ತೆಗೆದುಕೊಳ್ಳುವುದಿಲ್ಲವೇ?

ಅಧ್ಯಕ್ಷರು : ಇಷ್ಟು ಹೊತ್ತು ಮಾತನಾಡಿರುವಂಥಾದ್ದು ಶೂನ್ಯ ವೇಳೆ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಬರವಣಿಗೆಯಲ್ಲಿ ನಿನ್ನೆ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿಯನ್ನು ಕೊಡುತ್ತಿದ್ದರು, ಕೆಲವು ಕೈಗಾರಿಕೆಗಳಿಗೆ ಇದನ್ನು ನಿಲ್ಲಿಸಿದ್ದಾರೆ.

ಅಧ್ಯಕ್ಷರು : ಮಾನ್ಯ ಬೈರೇಗೌಡರೇ, ಇದಕ್ಕೆ ಮಾನ್ಯ ಆರ್.ವಿ. ದೇಶಪಾಂಡೆಯವರು ನಾಳೆ ತಯಾರಾಗಿ ಸಭೆಗೆ ಬರುತ್ತೇನೆ, ಅವರಿಗೆ ಫಲಪ್ರದವಾದಂತಹ ರೀತಿಯಲ್ಲಿ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದಾರೆ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ ಶೀತಲ ಗೃಹಗಳ ಬಗ್ಗೆಯೂ ನನಗತ ಉತ್ತರವನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು : ಆಯಿತು, ನಾಳೆ ಆ ವಿಷಯವನ್ನು ತೆಗೆದುಕೊಳ್ಳೋಣ, ನನಗೆ ಬೆಳಿಗ್ಗೆ ಸಚಿವರು ಫೋನ್ ಮಾಡಿ ಹೇಳಿದ್ದಾರೆ.

ಶ್ರೀ ಡಿ.ವಿ. ಸದಾನಂದಗೌಡ : ಮಾನ್ಯ ಸದಸ್ಯರಾದ ಸುಬ್ಬಾರೆಡ್ಡಿಯವರು ಒಂದು ಗಂಭೀರವಾದ ವಿಚಾರವನ್ನು ಪ್ರಸ್ತಾಪ ಮಾಡಲಿದ್ದಾರೆ.

ಅಧ್ಯಕ್ಷರು : ಅವರು ನನಗೆ ಪತ್ರವನ್ನು ಇವತ್ತು 12.45 ಗಂಟೆಗೆ ಕೊಟ್ಟಿದ್ದಾರೆ, ಮೂರು ದಿವಸಗಳ ಹಿಂದೆ ತೆಗೆದುಕೊಳ್ಳಬೇಕಾಗಿತ್ತೂ ಎಂದು ಹೇಳಿದ್ದಾರೆ. ಆದುದರಿಂದ ಅದನ್ನು ಈಗ ತೆಗೆದುಕೊಳ್ಳಲಾಗುವುದಿಲ್ಲ ನಾವು ಪಕ್ಷದ ಉಪನಾಯಕರಾಗಿ ಸಹಕರಿಸಿ. ಸುಮ್ಮನೆ ರೈಸ್ ಮಾಡಿದರೆ ಏನು ಪ್ರಯೋಜನವಾಗುವುದಿಲ್ಲ, ಸಂಬಂಧಪಟ್ಟ ಮಂತ್ರಿಗಳಿಗೆ ಅದನ್ನು ಕಳುಹಿಸಿಕೊಡುತ್ತೇವೆಂ ಸಮರ್ಪಕವಾದ ಉತ್ತರ ಬರಬೇಡವೇ? ಅವರು ಕೊಟ್ಟಿರುವುದನ್ನು ತೆಗೆದುಕೊಳ್ಳುತ್ತೇವೆ, ಆದರೆ ಇವತ್ತು ತೆಗೆದುಕೊಳ್ಳಲಾಗುವುದಿಲ್ಲ.

5. ಗಮನ ಸೆಳೆಯುವ ಸೂಚನೆ

ವಿಷಯ : (ಅ). ಹಾಸನ ತಾಲ್ಲೂಕು ವ್ಯಾವಸಾಯೋತ್ಪನ್ನ ಸಹಕಾರ ಮಾರಾಟ ಸಂಘದಲ್ಲಿ ನಡೆದಿರುವ ಅವ್ಯವಹಾರದಿಂದಾಗಿ ಸಂಘವು ಮುಚ್ಚುವ ಸ್ಥಿತಿಗೆ ಬಂದಿರುವುದು.

ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ) : ಅಧ್ಯಕ್ಷರೇ, ಹಾಸನ ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರ್ಗ ಸಂಘದಲ್ಲಿ ನಡೆದಿರುವ ಅವ್ಯವಹಾರದಿಂದಾಗಿ ಸಂಘವು ಮುಚ್ಚುವ ಸ್ಥಿತಿಗೆ ಬಂದಿರುವುದರ ಬಗ್ಗೆ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತೇನೆ.

+ಶ್ರೀ ಡಿ.ಕೆ. ಶಿವಕುಮಾರ್ (ಸಹಕಾರ ಸಚಿವರು) : ಅಧ್ಯಕ್ಷರೇ, ತಾಲ್ಲೋಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ(ನಿ), ಹಾಸನ, ಈ ಸಂಘವು ದಿನಾಂಕ 01-03-1949 ರಂದು ನೊಂದಾಯಿಸಲ್ಪಟ್ಟಿದ್ದು, ಈ ಸಂಘದಲ್ಲಿ 'ಎ' ತರಗತಿಯ 33, 'ಬಿ' ತರಗತಿಯ 1350 ಸದಸ್ಯರಿರುತ್ತಾರೆ. ಸದಸ್ಯರ ಒಟ್ಟು ಶೇರು ಬಂಡವಾಳ ರೂ. 40, 370-00 ಹಾಗೂ ರಾಜ್ಯ ಸರ್ಕಾರದ ಶೇರು ಬಂಡವಾಳ ರೂ. 4.95 ಲಕ್ಷ ಹೀಗೆ ಒಟ್ಟು ಶೇರು ಬಂಡವಾಳ ರೂ. 5, 35, 370-00 ಗಳಿರುತ್ತದೆ. ಈ ಸಂಘವು ಹಾಸನ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿಗತ ರೂ. 5, 63, 218-00 ಹಾಗೂ ಅದರ ಮೇಲಿನ ಬಡ್ಡಿ ರೂ. 9, 81, 091-00ಗಳ ಬಾಕಿಯಿದ್ದು, ಪೂರ್ತಿ ಸಾಲ ಸುಸ್ತಿಯಾಗಿರುತ್ತದೆ. ಇದರ ಜೊತೆಗೆ ಸರ್ಕಾರಕ್ಕೆ ರೂ. 42, 000-00ಗಳ ಸಾಲ ತೀರಿಸಲು ಬಾಕಿ ಇರುತ್ತದೆ.

ಸದರಿ ಸಂಘದಲ್ಲಿ 1983-84 ರಿಂದ 1995-96ನೇ ಸಾಲಿನ ವರೆಗೆ ಸಂಘದ ನೌಕರರುಗಳು ಹಣ ದುರುಪಯೋಗ ಮಾಡಿದ ಪ್ರಕರಣಗಳು ಕಳಕಂಡಂತಿರುತ್ತದೆ.